KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in

Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/JS-131/NASSCOM/2023-24/58 Date: 04/09/2023

**ಸುತ್ತೋಲೆ**

ವಿಷಯ: Artificial Intelligence ಮತ್ತು Digital Fluency ವಿಷಯವನ್ನು ಆನ್‌ಲೈನ್ / ಆಫ್‌ಲೈನ್‌ನಲ್ಲಿ ಕಲಿಯುಲು ಅವಕಾಶ ಕಲ್ಪಿಸುವ ಕುರಿತು.

ಉಲ್ಲೇಖ:
1. ಎಲ್ಲ ಪ್ರಾಚಾರ್ಯರುಗಳ ಮನವಿ ದಿನಾಂಕ: 15.06.2023.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಪತ್ರ ಸಂ. ಕರಾಉಶಿಪ / 2023-24 / 442, ದಿನಾಂಕ: 27.06.2023.
3. ಅಧೀನ / ಸಂಲಗ್ನ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯ ದಿನಾಂಕ: 14.07.2023.
4. ವಿದ್ಯಾವಿಷಯಕ ಪರಿಷತ್ ಸಭೆಯ ಠರಾವು ಸಂ. 21, ದಿನಾಂಕ: 31.08.2023.
5. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 04.09.2023

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ-2020 ರನ್ವಯ ಎಲ್ಲ ಪದವಿಗಳ ಮೊದಲನೆಯ ಸೆಮಿಸ್ಟರ್‌ಗೆ Digital Fluency ಹಾಗೂ ಮೂರನೇ ಸೆಮಿಸ್ಟರ್‌ಗೆ Artificial Intelligence ಗಳನ್ನು NASSCOM ಮುಖಾಂತರ ಆನ್‌ಲೈನ್‌ನಲ್ಲಿ ಕಲಿಯಲು NASSCOM ನವರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಎಲ್ಲ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸದರ ವಿಷಯಗಳನ್ನು NASSCOM ಮುಖಾಂತರ ಆನ್‌ಲೈನ್‌ನಲ್ಲಿ ಕಲಿಯಲು ಅವಕಾಶ ಮಾಡಿಕೊಡಲಾಗಿತ್ತು.

ಅದರಂತೆ, ಉಲ್ಲೇಖ 1 ರನ್ವಯ ಹಲವಾರು ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ಹಾಗೂ ವಿದ್ಯಾರ್ಥಿಗಳು ಸದರಿ ವಿಷಯಗಳನ್ನು Online ನಲ್ಲಿ ಕಲಿಯಲು / ಕಲಿಸಲು ತೊಂದರೆಯಾಗುತ್ತಿದೆ ಎಂದು ಮನವಿಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ನಿರ್ದೇಶನಕ್ಕಾಗಿ ಕೋರಲಾಗಿತ್ತು. ಸದರಿಯವರು ಉಲ್ಲೇಖಿತ 2 ರಲ್ಲಿ ತಿಳಿಸಿದಂತೆ Digital Fluency ಹಾಗೂ Artificial Intelligence ವಿಷಯ ಬೋಧನೆಯ ಗೊಂದಲದ ಕುರಿತು ತಮ್ಮ ವಿಶ್ವವಿದ್ಯಾಲಯದ ಹಂತದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಮತ್ತು ಸಂಬಂಧಪಟ್ಟ ಸಂಯೋಜಿತ ಮಹಾವಿದ್ಯಾಲಯಗಳಿಗೆ ಅವಶ್ಯಕ ಸಹಕಾರ ನೀಡಲು ಸೂಚಿಸಿರುತ್ತಾರೆ. ಅದರಂತೆ, ಉಲ್ಲೇಖ 3 ರನ್ವಯ ದಿನಾಂಕ: 31.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯವಾಗಿರುತ್ತದೆ:

**ವಿದ್ಯಾವಿಷಯಕ ಪರಿಷತ್ ಸಭೆ ಠರಾವು ಸಂ. 21, ದಿನಾಂಕ: 31.08.2023**

ಈ ವಿಷಯವನ್ನು ಈಗಾಗಲೇ ಪ್ರಾಚಾರ್ಯರ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ Digital Fluency ಮತ್ತು Artificial Intelligence ವಿಷಯಗಳನ್ನು Online ಅಥವಾ Offline ಮುಖಾಂತರ ಕಲಿಸಲು ನಿರ್ಣಯಿಸಲಾಯಿತು. ಸದರಿ Online / Offline ಆಯ್ಕೆಯನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳು ತಮ್ಮ ಮಹಾವಿದ್ಯಾಲಯದಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ ಮತ್ತು ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿರಿಸಿ ನಿರ್ಧರಿಸತಕ್ಕದ್ದೆಂದು ಹಾಗೂ Online ಅಥವಾ Offline ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಒಟ್ಟಾರೆಯಾಗಿ ಕೇವಲ Online ಅಥವಾ Offline ಮಾದರಿಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು.

ಮುಂದುವರೆದು, ಆಂತರಿಕ (Internal Assessement) ಮತ್ತು ಸೆಮಿಸ್ಟರ್ ಕೊನೆಯ (Semester End Examination) ಪರೀಕ್ಷೆಗಳನ್ನು ವಿಶ್ವವಿದ್ಯಾಲಯವು ಕಳೆದ ಸಾಲಿನಂತೆ MCQ ಮಾದರಿಯ ಪ್ರಶ್ನೆ ಪತ್ರಿಕೆಗಳನ್ನು ಅನುಸರಿಸಿ ಪರೀಕ್ಷೆ ಜರುಗಿಸುವುದು ಎಂದು ವಿದ್ಯಾವಿಷಯಕ ಪರಿಷತ್ ಸಭೆಯು ತೀರ್ಮಾನಿಸಿತು.

ಪು.ತಿ.ನೋ.

ಮೇಲಿನ ನಿರ್ಣಯದಂತೆ ಕ್ರಮ ಕೈಗೊಳ್ಳಲು ಹಾಗೂ ಆಯಾ ಮಹಾವಿದ್ಯಾಲಯಗಳ ಪ್ರಾಚಾರ್ಯರು Online ಅಥವಾ Offline ಮುಖಾಂತರ ಕಲಿಯುತ್ತಿರುವ ವಿದ್ಯಾರ್ಥಿಗಳ ಯಾದಿಯನ್ನು ಪ್ರತ್ಯೇಕವಾಗಿ ವಿದ್ಯಾಮಂಡಳ (ಎಸ್&ಟಿ) ವಿಭಾಗಕ್ಕೆ ಕಳುಹಿಸುವುದು.

04/9/23

ಕುಲಸಚಿವರು

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ ಇವರಿಗೆ ಮಾಹಿತಿಗಾಗಿ.
2. ಡಾ. ಶಿವಶಂಕರ ಎಸ್., ನೋಡಲ್ ಅಧಿಕಾರಿಗಳು, ಯು.ಯು.ಸಿ.ಎಂ.ಎಸ್. ಘಟಕ, ಕ.ವಿ.ವಿ. ಧಾರವಾಡ.
3. ಡಾ. ಎಸ್.ಎಂ.ತುವಾರ, ನೋಡಲ್ ಅಧಿಕಾರಿಗಳು, NEP ಘಟಕ, ಕ.ವಿ.ವಿ. ಧಾರವಾಡ.

**ಸಾದರಪೂರ್ವಕವಾಗಿ ಪ್ರತಿ:**

1. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಸಿಸ್ಟಮ್ ವಿಶ್ಲೇಷಕರು (System Analysist), ಗಣಕಯಂತ್ರ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಅಧೀಕ್ಷಕರು, ಪರೀಕ್ಷಾ ಗೌಪ್ಯ/ ಸ್ನಾತಕೋತ್ತರ / ಪ್ರಶ್ನೆ ಪತ್ರಿಕೆ / ಸಾಮಾನ್ಯ ಆಡಳಿತ ವಿಭಾಗ, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ಸಿ.ಡಿ.ಸಿ. (ಸಂಯೋಜನೆ) ವಿಭಾಗ, ಕ.ವಿ.ವಿ. ಧಾರವಾಡ.